

ವರ್ಷದ ಮೊಮ್ಮಗ ಕೆಲವು ಹೊತ್ತಿನಲ್ಲೇ ಪರಿಚಯದ ಕಿರುನಗೆ ಬೀರಿದಾಗ ಪ್ರಯಾಣದ ಆಯಾಸ ಮರೆಯಾಗಿತ್ತು.

ತಮ್ಮ ಮನೆಯಲ್ಲಿ ಕೇವಲ ಹುಷಾರಿಲ್ಲದಾಗ ಮಾತ್ರ ತಿನ್ನುತ್ತಿದ್ದ ಬ್ರೆಡ್, ಅಪರೂಪಕ್ಕೊಮ್ಮೆ ತಿನ್ನುತ್ತಿದ್ದ ಬೆಣ್ಣೆ, ಜಾಮ್-ಇವೆರಡು ಬಿಟ್ಟರೆ ಒಮ್ಮೆ ಹಿಟ್ಟು ನಾದಿ ಫ್ರಿಜ್‌ನಲ್ಲಿ ಇಟ್ಟು ವಾರ ಪೂರ್ತಿ ಮಾಡಿ ತಿನ್ನುತ್ತಿದ್ದ ಚಪಾತಿ, ಎಲ್ಲವೂ ಮೂರ್ತಿ ದಂಪತಿಗೆ ಕಷ್ಟವೇ ಎನಿಸಿತು. ಅನ್ನ ಕಂಡರೆ ಸಾಕು ಎನಿಸಿ, ಅಭಿಮಾನ ಬದಿಗಿರಿಸಿ, ಅಕ್ಕಿ ಕೊಟ್ಟರೆ ತಾವೇ ಅನ್ನ ಮಾಡಿಕೊಳ್ಳುವುದಾಗಿ ಸುಗುಣ ಸೊಸೆಗೆ ಹೇಳಿದರು. ಉತ್ತರ ಭಾರತದಲ್ಲಿ ಅಕ್ಕಿ ಅಭ್ಯಾಸ ಇಲ್ಲದಿರುವುದರಿಂದ ಮನೆಯಲ್ಲಿ ಇರಿಸಿಲ್ಲವೆಂದು ಹೇಳಿದ ಸೊಸೆ ತರಿಸಿಕೊಡುವ ಪ್ರಯತ್ನವೇನೂ ಮಾಡಲಿಲ್ಲ. ಮಲಗಲು ‘ಸ್ಲೀಪಿಂಗ್ ಬ್ಯಾಗ್’ ಇದ್ದುದರಿಂದ ನಿದ್ರೆ ಬರದೇ ಮೈ ನೋವು ಹೆಚ್ಚಾಗಿ ಹಾಸಿಗೆ ವ್ಯವಸ್ಥೆ ಮಾಡಲು ಮಗ-ಸೊಸೆಯನ್ನು ಕೇಳಿದಾಗ, ಸೊಸೆ ಚಾಪೆಯಂತಹದ್ದೊಂದು ಎಸೆದು ‘ಇಸ್ ಮ್ಯಾಟ್ ಪೆ ಸೋಜಾವೋ’ ಎಂದು ಹಿಂದಿಯಲ್ಲಿ ಗುಡುಗಿದಾಗ ಮೂರ್ತಿಗಳು ಮ್ಯಾಟ್‌ನಲ್ಲೇ ಮುದುಡಿಕೊಂಡರು. ಜೀವನಪೂರ್ತಿ ಅಪ್ಪ ಅಮ್ಮ ಇರುವುದು ತನ್ನ ಸೇವೆಗಾಗಿ ಎಂದು ಬೆಳೆದಿದ್ದ ವೈಷ್ಣವ್‌ಗೆ ತಾನು ಈಗ ಅವರನ್ನು ನೋಡಿಕೊಳ್ಳಬೇಕು ಎಂದು ಅನಿಸಲಿಲ್ಲ.

ದೇಶ ನೋಡುವ ಆಸೆ ಇದ್ದ ಮೂರ್ತಿ ದಂಪತಿ ಮಗನೊಂದಿಗೆ ವಾರಾಂತ್ಯದಲ್ಲಿ ಸುತ್ತಮುತ್ತಲ ಪ್ರವಾಸಿ ತಾಣ ನೋಡಿ ಸಣ್ಣ ಪುಟ್ಟ ತೊಂದರೆ ಎಂದು ಮರೆತು ಸಂಭ್ರಮಿಸಿದರು. ಫೋಟೋಗಳನ್ನು ಸ್ಟೇಟಸ್‌ಗೆ, ಫೇಸ್‌ಬುಕ್‌ಗೆ ಹಾಕುವುದನ್ನು ಮೂರ್ತಿಗಳು ಮರೆಯಲಿಲ್ಲ. ಹೆಚ್ಚಿನ ಲೈಕ್‌ಗಳು ತಮ್ಮ ಚಿನ್ನದ ಗರಿಯ ಹೊಳಪು ಹೆಚ್ಚಿಸಿದಂತೆ ಅವರಿಗೆ ಅನಿಸಿತು.

ಅಲಾಸ್ಕಾ ನೋಡಬೇಕು ಎಂಬ ಬಗ್ಗೆ ತಮ್ಮ ಬಹುದಿನದ ಆಸೆಯನ್ನು ಹೇಳಲು ಸಮಯಕ್ಕೆ ಕಾಯುತ್ತಿದ್ದ ಮೂರ್ತಿಯವರಿಗೆ ಮಗನ ಮುಖ ನೋಡಲು ಮತ್ತೊಂದು ವೀಕ್ ಎಂಡ್‌ವರೆಗೆ ಕಾಯಬೇಕು ಎಂದು ಗೊತ್ತಿದ್ದರೂ ತಡೆಯಲಾರದೇ ಒಳಗೆ ಸೇರಿದ ಮಗನ ರೂಮಿನ ಬಾಗಿಲು ಮೆಲ್ಲಗೆ ಕುಟ್ಟಿದರು. ಸ್ವಲ್ಪ ಹೊತ್ತಿನ ನಂತರ ಬಾಗಿಲು ದಢಾರನೇ ತೆರೆದ ಮಗ, ‘ರೂಮಿನಲ್ಲಿರುವಾಗ ಬಾಗಿಲು ಕುಟ್ಟಬಾರದೆಂಬ ಸಿಂಪಲ್ ಮ್ಯಾನರ್ಸ್ ಕೂಡಾ ಇಲ್ವಾ?’ ಎಂದು ಕಿರುಚಿದ. ಆತ್ಮಾಭಿಮಾನ ಕೈಯಲ್ಲಿ ಹಿಡಿದು ಅಲಾಸ್ಕಾ ನೋಡಬೇಕು ಎಂಬ ಆಸೆ ತೋಡಿಕೊಂಡರು. ಈಗ ತನ್ನ ಬಳಿ ಅಷ್ಟು ಹಣ ಇಲ್ಲವೆಂದು ಸಿಡುಕಿ ಬಾಗಿಲು ಹಾಕಿ ಒಳಗೆ ಸೇರಿಕೊಂಡ ವೈಷ್ಣವ್. ಅಲಾಸ್ಕಾ ನೋಡಿ ಬರುತ್ತೇನೆ ಎಂದು ಸ್ನೇಹಿತರಿಗೆ ಹೇಳಿ ಹೊರಟಿದ್ದ ಮೂರ್ತಿಯವರು ಮತ್ತೊಂದು ವೀಕೆಂಡ್‌ಗೆ ಕಾಯ್ದು ಟಿಕೆಟ್ ಹಾಗೂ ಹೋಟೆಲ್ ಬುಕ್ ಮಾಡಲು ತಾವೇ ಹಣ ಕೊಡುವುದಾಗಿ ಹೇಳಿದ ನಂತರ ವೈಷ್ಣವ್ ರಜಾ ಹಾಕಿ ಅಲಾಸ್ಕಾಗೆ ಟಿಕೆಟ್ ಬುಕ್ ಮಾಡಿದ.

ಅಲಾಸ್ಕಾ ನೋಡಲು ಉತ್ಸಾಹ ವ್ಯಕ್ತಪಡಿಸದ ಸುಗುಣ ಹಾಗೂ ಸೊಸೆ ಮನೆಯಲ್ಲೇ ಉಳಿದು ಅಪ್ಪ-ಮಗ ಇಬ್ಬರೂ ಅಲಾಸ್ಕಾಗೆ ಹೊರಟರು. ಕೆಲವೇ ಸೀಟುಗಳು ಭರ್ತಿಯಾಗಿದ್ದ ವಿಮಾನದಲ್ಲಿ